ಅ) ಕೃಷ್ಣಾ ಭಾಗ್ಯ ಜಲ ನಿಗಮದ ಮೊದಲನೇ ಕಂತಿನಲ್ಲಿ ಎಷ್ಟು ಹಣವನ್ನು ಸಂಗ್ರಹಿಸಲಾಗಿದೆ ಹಾಗೂ ಎರಡನೇ ಕಂತಿನಲ್ಲಿ ಎಷ್ಟು ಕ್ರೋಢೀಕರಿಸಲು ಉದ್ದೇಶಿಸಲಾಗಿದೆ?

ಆ) ಇದುವರೆವಿಗೂ ಸಂಗ್ರಹಿಸಿದ ಹಣದಲ್ಲಿ ಎಷ್ಟು ಹಣವನ್ನು ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ? (ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬುದರ ಬಗ್ಗೆ ವಿವರ ನೀಡುವುದು)

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಕೃಷ್ಣಾ ಭಾಗ್ಯ ಜಲ ನಿಗಮದ ಮೊದಲನೇ ಕಂತಿನಲ್ಲಿ ರೂ. 180 ಕೋಟಿ ರೂ.ಗಳನ್ನು ಸಂಗ್ರಹಿಸಿಡಲಾಗಿದೆ. ಎರಡನೇ ಕಂತಿನಲ್ಲಿ 250 ಕೋಟಿ ರೂ.ಗಳನ್ನು 1996ರ ಮಾರ್ಚ್ ತಿಂಗಳ ಒಳಗಾಗಿ ಸಂಗ್ರಹಿಸಲು ಉದ್ದೇಶಿಸಲಾಗಿದೆ.

ಆ) ಇದುವರೆವಿಗೂ ಸಂಗ್ರಹಿಸಿದ ಹಣದಲ್ಲಿ 53.40 ಕೋಟಿ ರೂ.ಗಳನ್ನು ವಿವಿಧ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳ ವಿವರ ಈ ಕೆಳಕಂಡಂತೆ ಇದೆ:

1)	ಸಿಬ್ಬಂದಿ ವೆಚ್ಚ	5.90 ಕೋಟಿ
2)	ಆಲಮಟ್ಟಿ ಎಡದಂತೆ ಕಾಲುವೆ ಹೆಡ್‌ವರ್ಕ್ಸ್, ಏತ ನೀರಾವರಿ ಮತ್ತು ಕಾಲುವೆಗಳು	3.90 ಕೋಟಿ
3)	ಜೇವರ್ಗಿ ಶಾಖಾ ಕಾಲುವೆ ಮತ್ತು ನಾರಾಯಣಪುರ ಬಲದಂಡೆ ಶಾಖಾ ಕಾಲುವೆ	8.80 ಕೋಟಿ
4)	ಇಂಡಿ ಶಾಖಾ ಕಾಲುವೆ	1.30 ಕೋಟಿ
5)	ರೋನ್ ಆಕ್ಷಿಡಕ್ಟ್ ಮತ್ತು ಇತರೆ ಕೆಲಸಗಳು	3.00 ಕೋಟಿ
6)	ಭೂ ಸ್ವಾಧೀನ ಮತ್ತು ಭೂ ವಸತಿ ಕಾಮಗಾರಿಗಳು ಮತ್ತು ಇತರೆ ಕೆಲಸಗಳು	20.00 ಕೋಟಿ
7)	ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ ಪುನರ್ ವಸತಿ ಕಾಮಗಾರಿಗಳು	10.00 ಕೋಟಿ
	ಒಟ್ಟು ರೂ.	53.40 ಕೋಟಿ

ರಾಜ್ಯ ಮಾನವ ಹಕ್ಕುಗಳ ಆಯೋಗದ ರಚನೆ

141 - ಶ್ರೀ ಎಸ್. ಸುರೇಶಕುಮಾರ್ (ರಾಜಾಜಿನಗರ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಮಾನವ ಹಕ್ಕುಗಳ ಆಯೋಗ ರಚನೆ ಆಗಿದೆಯೇ?

ಆ) ಹಾಗಿದ್ದಲ್ಲಿ ಈಗಾಗಲೇ ಅವುಗಳ ಕಾರ್ಯರಚನೆ ಹಾಗೂ ಕಾರ್ಯವ್ಯಾಪ್ತಿ ಏನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಭದ್ರಾ ಜಲಾಶಯದ ಬಲದಂಡೆ ಕಾಲುವೆಯ ದುರಸ್ತಿ

31 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭದ್ರಾ ಜಲಾಶಯದ ಬಲದಂಡೆ ಕಾಲುವೆಯು ದುರಸ್ತಿ ಪ್ರಗತಿ

ಆ) ಹಾಗಾದರೆ ಅದು ಯಾವಾಗ ಸಂಪೂರ್ಣಗೊಳ್ಳುತ್ತದೆ ಮತ್ತು ಉಪಯೋಗಕ್ಕೆ ಬಳಸಲಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಭದ್ರಾ ಜಲಾಶಯದ ಬಲದಂಡೆ ಕಾಲುವೆಯ ಗೈಡ್‌ವಾಲ್‌ನ ಶಾಶ್ವತ ದುರಸ್ತಿ ಕಾಮಗಾರಿಯ ಪ್ರಸ್ತುತ ಪ್ರಗತಿ ಈ ಕೆಳಕಂಡಂತಿದೆ.

ಒಟ್ಟು ಕಾಂಕ್ರೀಟ್ ಪರಿಮಾಣ	33,451 ಘನ.ಮೀ.
ಸಾಧಿಸಲಾದ ಪ್ರಗತಿ	28,757 ಘನ.ಮೀ.
ಆರ್ಥಿಕ ಅಂದಾಜು ಮೊತ್ತ	ರೂ. 950 ಲಕ್ಷ
ಸಾಧಿಸಲಾದ ಪ್ರಗತಿ (ದಿನಾಂಕ 31-1-96ಕ್ಕೆ)	ರೂ. 715.7 ಲಕ್ಷ

ಆ) ಭದ್ರಾ ಬಲದಂಡೆ ಕಾಲುವೆಯ ದುರಸ್ತಿಯನ್ನು ದಿನಾಂಕ 25-3-96ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಅದರಂತೆ 1996ರ ಏಪ್ರಿಲ್ 96 ಮೊದಲ ವಾರದಲ್ಲಿ ಬಲದಂಡೆ ನಾಲೆಯನ್ನು ನೀರು ಹರಿಸಲು ಉಪಯೋಗಿಸಿಕೊಳ್ಳಲು ಯೋಜಿಸಲಾಗಿದೆ.

ಸಚಿವ ಸಂಪುಟ ಸದಸ್ಯರ ವಿದೇಶ ಪ್ರವಾಸ ಕುರಿತು

29 - ಶ್ರೀ ಎಚ್. ಶಿವಪ್ಪ (ಹರಿಹರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ 1-1-1995ರಿಂದ ಜನವರಿ 1996ರ ಅಂತ್ಯದವರೆಗೆ, ವಿದೇಶ ಪ್ರವಾಸ ಮಾಡಿದ ಪ್ರತಿ ಸಚಿವ ಸಂಪುಟದ ಸದಸ್ಯರಿಗಾಗಿ ರಾಜ್ಯದ ಬೊಕ್ಕಸದಿಂದ ಮಾಡಿರುವ ಒಟ್ಟು ವೆಚ್ಚ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 1)	ಮುಖ್ಯಮಂತ್ರಿಗಳು	-	1,42,245
2)	ಉಪ ಮುಖ್ಯಮಂತ್ರಿ	-	59,125
3)	ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು	-	1,45,442
4)	ಗಣಿ ಮತ್ತು ಭೂ ವಿಜ್ಞಾನ ಸಚಿವರು	-	89,000
5)	ಕೃಷಿ ಸಚಿವರು	-	44,700
6)	ತೋಟಗಾರಿಕೆ ರಾಜ್ಯ ಸಚಿವರು	-	55,000
7)	ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ಸ್ ರಾಜ್ಯ ಸಚಿವರು	-	30,365